"ಅವರಿರೋದು ಬೆಂಗಳೂರಲ್ಲಿ. ಈಗ್ಯಾಕೆ ಬಂತೋ ಪ್ರಾಣಿ?"

"ಬೆಂಗಳೂರಲ್ಲಾ?" ಎಂದು ಬಾಯಿ ಕಳೆದುಕೊಂಡು ಕೇಳಿದ ಸೊಸೆ, 'ಇದು ಸರಿಯಲ್ಲ...' ಎನ್ನುವಂತೆ ಗಲಗಲ ಅತ್ತಿತ್ತ ತಲೆ ಆಡಿಸಿದಳು. ಸೊಸೆಯ ಮನಸ್ಸು ಅರ್ಥವಾಗುತ್ತಿದೆ ಲೀಲಮ್ಮನಿಗೆ.

"ನಾವೇನು ಅಕ್ಷತೆ ಕೊಟ್ಟು ಕರೆದಿದ್ದಾ? ತಾವಾಗಿ ಬಂದೋರನ್ನ ಮನೆ ಒಳಗೆ ಬರ್ಬೇಡಿ ಅನ್ನೋಕಾಗುತ್ತಾ? ಬರೋರು ಅರ್ಥ ಮಾಡ್ಕಂಬೇಕು..." ಅಸಹಾಯಕತೆಯ ಮಾತಾಡಿದರು ಲೀಲಮ್ಮ. ಅಷ್ಟು ಹೊತ್ತಿಗೆ ವೆಂಕಪ್ಪಯ್ಯನ ಸವಾರಿ ಒಳಗೆ ಬಂತು.

"ಏನ್ರೇ, ಕುಡಿಯೋಕೆ ತಣ್ಣಗೆ ಏನಾರೂ ಸಿಗುತ್ತಾ?"

"ತಣ್ಣೀರಿಗೆ ಬರಗಾಲಾನಾ? ತಗೊಂಡ್ಹೋಗಿ ಕೊಡಿ..." ಸಿಡುಕಿದರು ಲೀಲಮ್ಮ.

"ಮಾರಾಯ್ತೀ, ಕೊನೇಪಕ್ಷ ಮಜ್ಜಿಗೆನೀರಿಗೆ ಚಿಟಿಕೆ ಉಪ್ಪಾದ್ರೂ ಬೆರೆಸಿ ಕೊಡು. ಬಸ್ಸಿಳಿದು ಎರಡು ಮೈಲಿ ನಡ್ಕೊಂಡು ಬಂದಿದಾನೆ ಪುಣ್ಯಾತ್ಮ, ಅದೂ ಈ ವಯಸ್ಸಲ್ಲಿ..."

ಲೀಲಮ್ಮನಿಗೂ ಅಯ್ಯೋ ಪಾಪ ಅನಿಸಿದ್ದು ಸುಳ್ಳಲ್ಲ. ಅದು ಹಳ್ಳಿ ಮನೆ. ಯಾರು ಎಷ್ಟು ಹೊತ್ತಿಗೆ ಬಂದರೂ ಒಂತುತ್ತು ಅನ್ನಕ್ಕೆ ತತ್ವಾರ ಇರಲಿಲ್ಲ. 'ಇರಿ ನಾಕು ದಿನ. ಅಪ್ರೂಪಕ್ಕೆ ಬಂದಿದೀರಿ... ಎಂದು ಉಪಚಾರ ಹೇಳಿ ಬಂದವರನ್ನು ಎರಡು ದಿನ ಹೆಚ್ಚಿಗೆ ಉಳಿಸಿಕೊಳ್ಳುವ ಜಾಯಮಾನ. ಎಲ್ಲಿಂದ ವಕ್ಕರಿಸಿಕೊಂಡಿತೋ ಹಾಳು ಕಾಯಿಲೆ? ಬಸ್ಸಲ್ಲಿ, ರೈಲಲ್ಲಿ ಬಂದರು ಅಂದರೆ ಜೊತೆಯಲ್ಲಿ ಕಾಯಿಲೆ ಬೀಜ ತೆಗೆದುಕೊಂಡೇ ಬಂದಿದ್ದಾರೆ ಎನ್ನುವ ತಿಳಿವಳಿಕೆ. ಹೆದರಿಕೆ. 'ಯಾಕೆ ಬರಬೇಕಿತ್ತೋ, ಮನೇಲಿ ಹೇಳೋರು ಕೇಳೋರು ಯಾರೂ ಇಲ್ವಾ?' ಎಂದು ಒಳಗೊಳಗೇ ಬೈದುಕೊಂಡರೂ ಪಾವಿನ ಅಳತೆಯ ದೊಡ್ಡ ಸ್ಟೀಲ್ ಲೋಟದ ತುಂಬಾ ಮಜ್ಜಿಗೆನೀರು ಮಾಡಿಕೊಟ್ಟರು ಲೀಲಮ್ಮ, ಘಮಕ್ಕೆ ಚೂರು ಇಂಗೂ ಬೆರೆಸಿ. ಮಾವ ಆಚೆ ಹೋಗುತ್ತಿದ್ದಂತೆ ಸೊಸೆ ಗೊಣಗುಟ್ಟಿದಳು,

"ಇನ್ನು ಮಾವಯ್ಯಂಗೆ ಗಮ್ಮತ್ತಾಯ್ತು. ಯಾರಾದ್ರೂ ಮಾತಿಗೆ ಸಿಕ್ಕಿದ್ರೆ ಸಾಕು ಅಂತ ಹದ್ದಿನ ಹಾಗೆ ಕಾದ್ಕಂಡಿರ್ತಾರೆ. ಇನ್ನು ವಾರಗಟ್ಲೆ ಇಲ್ಲೇ ಉಳಿಸ್ಕಂತಾರೆ, ನೋಡಿ ಬೇಕಾರೆ..."

★★★

ಉಟ್ಟ ಬಟ್ಟೆಯಲ್ಲಿ ಬಂದಿದ್ದ ಗೆಳೆಯನನ್ನು ಕಂಡು ವೆಂಕಪ್ಪಯ್ಯನಿಗೆ ಬೆರಳು ಕಚ್ಚಿಕೊಳ್ಳುವಷ್ಟು ಆಶ್ಚರ್ಯ.

"ಎಂತಾ ಮಾರಾಯಾ, ಒಂದು ಕೈಚೀಲಾನೂ ತರದೆ ನೆಟ್ಟಗೆ ಕೈ ಬೀಸ್ಕೊಂಡು ಬಂದಿದೀಯಲ್ಲ?" ಕೇಳಲೇಬೇಕಾದ ಸಂದರ್ಭ. ಕೇಳಿದರು ವೆಂಕಪ್ಪಯ್ಯ.

"ನಿಮ್ಮನೇಲಿ ಒಂದು ಪಂಚೆ, ಟವೆಲ್ಲು ಸಿಗಲ್ಲನೋ? ಅದನ್ನೂ ಹೊತ್ಕಂಡ್ಬರ್ಬೇಕಾ?"

"ಮಾತಿಗೆ ಕೇಳ್ದೆ..."

ವೆಂಕಪ್ಪಯ್ಯ ಒಳಗಿನಿಂದ ತಮ್ಮದೊಂದು ಪಂಚೆ, ಟವೆಲ್ಲು ತಂದುಕೊಟ್ಟು ಗೆಳೆಯನನ್ನು ಬಚ್ಚಲಿನ ಬಾಗಿಲವರೆಗೆ ತಂದುಬಿಟ್ಟರು.

★★★

ಯಾವ ಮುಲಾಜೂ ಇಟ್ಟುಕೊಳ್ಳದೆ ಪೊಗದಸ್ತಾಗಿ ಉಂಡರು ಶ್ರೀನಿವಾಸರಾಯರು. ಬಾಳೆಲೆಯಲ್ಲಿ ಬಡಿಸಿದ್ದ ಅನ್ನವನ್ನು ಅತ್ತಿತ್ತ ಅಗಲಿಸುತ್ತಾ ಕಟ್ಟೆ ಕಟ್ಟಿ ಹೊಂಡ ಮಾಡಿ ಸಾರು ಬಡಿಸಿಕೊಂಡರು. ಅವರು 'ಸಾಕು' ಎಂದು ಕೈ ಅಡ್ಡ ಹಿಡಿಯುವುದಕ್ಕೆ ಮುಂಚೆಯೇ ಸೊಸೆ ಸಾರು ಬಡಿಸುವುದನ್ನು ನಿಲ್ಲಿಸಿ ಒಳಗೆ ಹೋಗಿದ್ದು ವೆಂಕಪ್ಪಯ್ಯನ ಗಮನಕ್ಕೆ ಬಂದು ಹುಬ್ಬು ಗಂಟಾಯ್ತು.

"ಹೊಟ್ಟೆ ತುಂಬಾ ಊಟ ಮಾಡಿ ಯುಗ ಆಗಿತ್ತು ಮಾರಾಯಾ. ಶುಗರ್ ಅಂತ ಏನು ಕೊಡೋಕೂ ಮನೇಲಿ ಚೌಕಾಶಿ..."